ಶ್ರೀ ಎಂ. ಪಿ. ಪ್ರಕಾಶ್ : ಈಗಾಗಲೇ ಒಂದು ಅಭಿಪ್ರಾಯಕ್ಕೆ ಬಂದಿದೆ, ಹಿಂದೆ ಕೂಡ ನಿರ್ಧಾರ ಮಾಡಿದ್ದೇವೆ ಫ್ಲಾಗ್ ಆಕ್ಟಿನ ಮೂಲಕವಾಗಿ ಆಗಿರುವ ಅಧಿಸೂಚನೆಗಳು, ನಂತರ ಇಲ್ಲಿರತಕ್ಕಂಥ ಸನ್ಮಾನ್ಯ ಸದಸ್ಯರ ಎಲ್ಲಾ ಭಾವನೆಗಳನ್ನು ಕಳುಹಿಸಿಕೊಟ್ಟ ನಂತರ; ಕೇಂದ್ರ ಸರ್ಕಾರದಿಂದ ಉತ್ತರ ಕೂಡ ಬಂದನಂತರ ಆ ಸಭೆಯ ಅಧ್ಯಕ್ಷತೆಯನ್ನು ಶಾಸಕರು ವಹಿಸಬೇಕು, ಉಳಿದಂತಹ ಅಧಿಕಾರಿ ವರ್ಗದವರು ಫ್ಲಾಗ್ ಹಾಯಿಸ್ಟ್‌ಮಾಡಬೇಕು ಎನ್ನುವುದು ಇಲ್ಲಿವರೆಗೆ ಇದ್ದಂತಹ ಆಜ್ಞೆ, ಆ ಬಗ್ಗೆ ನಾವು ಡಿಪಿಎಆರ್ ಜೊತೆ ಮಾತನಾಡಿ ಅದಕ್ಕೆ ಬೇಕಾದಂತಹ ಸುತ್ತೋಲೆಯನ್ನು ಕಳುಹಿಸಿಕೊಡಲು ಮಾನ್ಯ ಮುಖ್ಯಮಂತ್ರಿಗಳೊಡನೆ ಮಾತನಾಡಿ ಅದನ್ನು ಪ್ರಕಟಣೆ ಮಾಡಿಸುತ್ತೇವೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಾನು ಆ ಸರ್ಕ್ಯುಲರ್ ಅನ್ನು ಓದಿದೆ ಮುಖ್ಯಮಂತ್ರಿಗಳಿಗೆ ದೀರ್ಘವಾದಂತ ಟಿಪ್ಪಣಿಯನ್ನು ಈ ರೀತಿಯಾಗಿದೆ ಎಂದು ಮುಖ್ಯಮಂತ್ರಿಗಳ ಮುಂದೆ ಮಂಡಿಸಿದ್ದೆವು ಅದನ್ನು ಮುಖ್ಯಮಂತ್ರಿಗಳು ಅನುಮೋದನೆ ಮಾಡಿ ನಿರ್ದೇಶನ ಮಾಡಿದ್ದಾರೆಂದು ಸರ್ಕ್ಯುಲರ್‌ನಲ್ಲಿದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ತಾವು ಭರವಸೆಯನ್ನು ಕೊಟ್ಟಿದ್ದೀರಿ ತಾವು ಹಿಂದೆಯೂ ಕೊಟ್ಟಿದ್ದೀರಿ ಸನ್ಮಾನ್ಯ ಸಿಂಧ್ಯಾರವರು ಮಾತನಾಡಿದ್ದಾರೆ, ಮುಖ್ಯಮಂತ್ರಿಗಳು ಮಾತನಾಡಿದ್ದಾರೆ ಆಮೇಲೆ ಬಿಸಿನೆಸ್ ಅಡ್ವೈಸರಿ ಕಮಿಟಿ ಮುಂದೆ ಕುಳಿತು, ಅದನ್ನು ತಿದ್ದುಪಡಿ ಮಾಡುವುದಕ್ಕಾಗುವುದಿಲ್ಲ, ನಮ್ಮ ಕೈಯ್‌ನಲ್ಲಿ ಇಲ್ಲ, ಅಧ್ಯಕ್ಷತೆಯನ್ನು ವಹಿಸುವುದನ್ನು ಶಾಸಕರಿಗೆ ಕೊಡುತ್ತೇವೆಂದು ತಮ್ಮ ಸಮಕ್ಷಮ ತೀರ್ಮಾನವಾಗಿದೆ, ಪ್ರತಿ ಸಾರಿ ನಾವು ಅಲ್ಲಿ ನಾವು ಅಧ್ಯಕ್ಷತೆಯನ್ನು ವಹಿಸುತ್ತೇವೆಂದು ಬೇಡಬೇಕಾ ಸರ್?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಹಿಂದೆ ಕೂಡ ಅನೇಕ ಸಲ ಈ ಬಗ್ಗೆ ಸದನದಲ್ಲಿ ಪ್ರಶ್ನೆ ಬಂದು ತೀರ್ಮಾನವಾಗಿದೆ.

ಅಧ್ಯಕ್ಷರು : ಅದನ್ನು, ಮುಖ್ಯ ಕಾರ್ಯದರ್ಶಿಯವರನ್ನು ಕರೆದು ಮಾತನಾಡಿ ಒಂದು ತೀರ್ಮಾನವನ್ನು 15ನೇ ತಾರೀಖಿನೊಳಗೆ ತಕ್ಷಣ ತೆಗೆದುಕೊಳ್ಳೋಣ.

ಶ್ರೀ ಎಂ. ಪಿ. ಪ್ರಕಾಶ್ : ಸಭೆಗೇನು ಈ ಮಾಹಿತಿ ಬಂದಿದೆ, ಈಗ ಇದು ನನ್ನ ಗಮನಕ್ಕೆ ಬಂದಿದೆ, ಇದನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ದಿವಸ ರಾತ್ರಿಯೇ ತರುತ್ತೇನೆ, ನಾಳೆ ಈ ವಿಚಾರದಲ್ಲಿ ಸರಿಯಾದ ಕ್ರಮವನ್ನು ಕೈಗೊಳ್ಳುತ್ತೇನೆ.

10. ಪ್ರಕಟಣೆ.

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದ ಸಂದೇಶ.

ಅಧ್ಯಕ್ಷರು : ಈಗ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು 2005ನೇ ಸಾಲಿನ ಕರ್ನಾಟಕ ಮನೋರಂಜನೆ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಈ ದಿನ, 3ನೇ ಆಗಸ್ಟ್ 2005ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.